

**ರಜನಿಕಾಂತ್ ನಟಿಸಿರುವ 2.0 ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದೆ. ನವೆಂಬರ್ 29ರಂದು 2.0 ವಿಶ್ವದಾದ್ಯಂತ ತೆರೆಗೆ ಅಪ್ಪಳಿಸಲಿದೆ.**

■ ಬಿಂದು

# ರಜನಿ ಮಾಯೆ

ರಜನಿಕಾಂತ್ ನಟಿಸಿರುವ 2.0 ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದೆ. ನವೆಂಬರ್ 29ರಂದು 2.0 ವಿಶ್ವದಾದ್ಯಂತ ತೆರೆಗೆ ಅಪ್ಪಳಿಸಲಿದೆ. ಭಾರತೀಯ ಚಿತ್ರರಂಗದಲ್ಲೇ ಅತ್ಯಧಿಕ ಬಜೆಟ್‌ನ ಸಿನಿಮಾ ಇದು ಎಂದಿದ್ದಾರೆ ರಜನಿ. ಈ ಸಿನಿಮಾ ನಿರ್ಮಾಣಕ್ಕೆ 600 ಕೋಟಿ ರೂಪಾಯಿ ವೆಚ್ಚವಾಗಿದೆಯಂತೆ. '300 ಕೋಟಿ ರೂಪಾಯಿ ಎಂದು ಮೊದಲು ಅಂದುಕೊಂಡಿದ್ದೆವು. ನಿರ್ಮಾಣ ತಡವಾದಂತೆಯೇ ವೆಚ್ಚವೂ ಏರುತ್ತಾ ಹೋಗಿದೆ. ಆದರೆ ನಿರ್ದೇಶಕ ಶಂಕರ್ ಅವರ ಅದ್ಭುತ ಕೈಚಳಕದಿಂದಾಗಿ ಈ ಚಿತ್ರ ಸೂಪರ್‌ಡೂಪರ್ ಹಿಟ್ ಆಗುವುದು ಖಂಡಿತ' ಎಂದಿದ್ದಾರೆ ರಜನಿ. ತಮಿಳು ಮಾತ್ರವಲ್ಲ, ಭಾರತೀಯ ಚಿತ್ರರಂಗ ಕಂಡ ಅತಿದೊಡ್ಡ ಷೋಮ್ಯಾನ್ ನಿರ್ದೇಶಕರಲ್ಲಿ ಶಂಕರ್ ಒಬ್ಬರು ಎನ್ನುವುದರಲ್ಲಿ ಎರಡು ಮಾತಿಲ್ಲ. ಕಳೆದ 25 ವರ್ಷಗಳಿಂದ ಆತ ನಿರ್ದೇಶಿಸಿದ ಯಾವ ಸಿನಿಮಾವೂ ಬಾಕ್ಸಾಫೀಸ್‌ನಲ್ಲಿ ಸೋತಿಲ್ಲ. ಆದರೆ 600 ಕೋಟಿ ರೂಪಾಯಿಯಷ್ಟು ದೊಡ್ಡ ಮೊತ್ತ ಬಿಡುಗಡೆಯ ಬಳಿಕ ಮರಳಿ ಬರಬಹುದೆ.. ಎನ್ನುವುದು ಇದೀಗ ಕೆಲವರು ಎತ್ತಿರುವ ಪ್ರಶ್ನೆ.

ತಮಿಳು, ತೆಲುಗು ಮತ್ತು ಹಿಂದಿಯಲ್ಲಿ ಏಕಕಾಲಕ್ಕೆ ಬಿಡುಗಡೆ ಕಾಣುವ ಈ ಚಿತ್ರ ದೂರದ ಅಮೆರಿಕ, ಇಂಗ್ಲೆಂಡ್‌ಗಳಲ್ಲೂ ತೆರೆ ಕಾಣಲಿದೆ. ಸಾಮಾನ್ಯವಾಗಿ ರಜನಿ ಚಿತ್ರಕ್ಕೆ ಒಂದು ಮ್ಯಾಜಿಕ್ ಎನ್ನಬಹುದಾದ ಆರಂಭ ಸಿಗುತ್ತದೆ. ಅದಕ್ಕಿಂತ ಮುಖ್ಯವಾಗಿ ಉಪಗ್ರಹ ಪ್ರಸಾರ ಹಕ್ಕು ಮತ್ತು ಸಂಗೀತದ ಹಕ್ಕುಗಳಲ್ಲೇ ರಜನಿ ಸಿನಿಮಾಗಳು ಬಿಡುಗಡೆಗೆ ಮುನ್ನ ಸಾಕಷ್ಟು ಹಣ ದುಡಿಯುತ್ತವೆ. ಈ ವರ್ಷದ ಜೂನ್‌ನಲ್ಲಿ ಬಿಡುಗಡೆಯಾದ ರಜನಿ ಅಭಿನಯದ 'ಕಾಳ' ಸಿನಿಮಾ ಹೀಗೆ ಬಿಡುಗಡೆಗೆ ಮುನ್ನವೇ ಮುಕ್ಕಾಲು ಪಾಲು ಬಂಡವಾಳವನ್ನು ವಾಪಸ್ ಪಡೆದಿತ್ತು. 'ಕಾಳ' ಚಿತ್ರ ತಯಾರಾದದ್ದು 140 ಕೋಟಿ ರೂಪಾಯಿ ವೆಚ್ಚದಲ್ಲಿ. ಚೆನ್ನೈನಲ್ಲಿ ಒಂದೇ ದಿನ ಸಿಂಗಲ್ ಥಿಯೇಟರ್‌ನಲ್ಲಿ ಅದು 1.76 ಕೋಟಿ ರೂಪಾಯಿ ಗಳಿಕೆ ನಡೆಸಿದ್ದು ತಮಿಳು ಚಿತ್ರೋದ್ಯಮದಲ್ಲಿ ಸಾರ್ವಕಾಲಿಕ ದಾಖಲೆ. ಸರ್ಕಾರದ ವಿಶೇಷ ಅನುಮತಿಯೊಂದಿಗೆ ಚೆನ್ನೈನಲ್ಲಿ ಈ ಸಿನಿಮಾದ ಷೋಗಳು ಮೊದಲ ವಾರ ಬೆಳಿಗ್ಗೆ 4 ಗಂಟೆಗೇ ಆರಂಭವಾಗಿದ್ದವು.

ಈಗ 2.0 ಗೆ ಸೃಷ್ಟಿಯಾಗಿರುವ ಹೈಪ್ 'ಕಾಳ'ನನ್ನೂ ಮೀರಿಸಿದೆ. ಅದೂ ಅಲ್ಲದೆ ಈ ಹಿಂದೆ ಬಿಡುಗಡೆಯಾಗಿ ಸೂಪರ್‌ಹಿಟ್ ಆದ 'ಎಂಥಿರನ್' ಚಿತ್ರದ ಸೀಕ್ವೆಲ್ ಇದು. 'ಎಂಥಿರನ್' ಸಿನಿಮಾದ ಚಿಟ್ಟಿ ಪಾತ್ರ ಈಗಲೂ ಪ್ರೇಕ್ಷಕರ ಮನಸ್ಸಿನಲ್ಲಿ ಹಸಿರಾಗಿದೆ. ಹಾಗಾಗಿ 2.0 ಬಾಕ್ಸಾಫೀಸ್ ಕಲೆಕ್ಷನ್ ಹೊಸ ದಾಖಲೆ ಬರೆಯುವ ನಿರೀಕ್ಷೆ ಇದೆ. 3ಡಿ ವಿಶುವಲ್ ಮತ್ತು 4ಡಿ ಸೌಂಡ್ ತಂತ್ರಜ್ಞಾನದ ಹೊಸ ಸಿನಿಮಾದಲ್ಲಿ ನಟಿಸಲು ರಜನಿಕಾಂತ್ ಸಾಕಷ್ಟು ಶ್ರಮ ಪಟ್ಟಿದ್ದಾರೆ. ದೆಹಲಿಯಲ್ಲಿ ಕ್ಲೈಮ್ಯಾಕ್ಸ್ ದೃಶ್ಯಕ್ಕೆ 6 ತಿಂಗಳು ಯೋಜನೆ ಮಾಡಲಾಗಿತ್ತಂತೆ. 500 ಮಂದಿ ತಂತ್ರಜ್ಞರು ಜತೆಗಿದ್ದರು. 12 ಕೆಜಿ ತೂಕದ ಬಾಡಿ ಸೂಟ್ ಧರಿಸಿಕೊಂಡು ನಟಿಸಿದ ರಜನಿ, ದೆಹಲಿ 47 ಡಿಗ್ರಿ ಉರಿಬಿಸಿಲಿನಿಂದಾಗಿ ಒಂದು ಹಂತದಲ್ಲಿ ತೀವ್ರ ಅನಾರೋಗ್ಯಕ್ಕೆ ಒಳಗಾಗಿದ್ದರಂತೆ. ಆದರೂ ಶೂಟಿಂಗ್ ನಿಲ್ಲಿಸಲಿಲ್ಲ ಎನ್ನುತ್ತಾರೆ ನಿರ್ದೇಶಕ ಶಂಕರ್.

ಹಿಂದಿಯ ಅಕ್ಷಯಕುಮಾರ್ ಚಿತ್ರದ ವಿಶೇಷ ಆಕರ್ಷಣೆ. 'ಈ ವಿಲ್ಲನ್ ಪಾತ್ರದ ಮೇಕಪ್‌ಗೆ ಪ್ರತಿದಿನ ಮೂರೂವರೆ ಗಂಟೆ ತಗಲುತ್ತಿತ್ತು. ಶೂಟಿಂಗ್ ಬಳಿಕ ಮೇಕಪ್ ತೆಗೆಯಲು ಒಂದೂವರೆ ಗಂಟೆ! ನನ್ನ ಜೀವಮಾನದಲ್ಲೇ ಇಂತಹ ಇನ್ನೊಂದು ಸಿನಿಮಾದಲ್ಲಿ ನಟಿಸಿಲ್ಲ' ಎಂದು ಅಕ್ಷಯ್ ಅಚ್ಚರಿ ವ್ಯಕ್ತಪಡಿಸಿದ್ದಾರೆ.

ತೆಲುಗಿನ ನಿರ್ದೇಶಕ ರಾಜಮೌಳಿಯ 'ಬಾಹುಬಲಿ' ಭಾರತೀಯ ಚಿತ್ರರಂಗದಲ್ಲಿ ಈವರೆಗಿನ ಅತಿದೊಡ್ಡ ಬಜೆಟ್ ಚಿತ್ರವಾಗಿತ್ತು. ಈಗ 2.0 ಅದನ್ನೂ ಮೀರಿಸಿ ಸುದ್ದಿ ಮಾಡುತ್ತಿದೆ. ರಜನಿ ಸದ್ಯಕ್ಕಂತೂ ಭಾರತೀಯ ಚಿತ್ರರಂಗದ ಅದ್ಭುತ ಹೀರೊ ಎನ್ನುವುದರಲ್ಲಿ ಎರಡು ಮಾತಿಲ್ಲ. ಪೂರ್ವಭಾವಿ ಪ್ರಚಾರದಲ್ಲಿ ಆತನನ್ನು ಮೀರಿಸುವ ಇನ್ನೊಬ್ಬ ಹೀರೊ ಭಾರತದಲ್ಲಿಲ್ಲ. ಕೆಲವೊಮ್ಮೆ ಇಂತಹ ಪ್ರಚಾರವೇ ಭಾರವಾಗಿ ಚಿತ್ರಕ್ಕೆ ಮುಳುವಾಗುವುದಿದೆ. ಆದರೆ 2.0 ಟ್ರೇಲರ್ ನೋಡಿದವರು ಈ ಚಿತ್ರ ಹಾಗಿಲ್ಲ ಎನ್ನುತ್ತಿದ್ದಾರೆ. ಅದೆಷ್ಟು ಸತ್ಯ ಎನ್ನುವುದು ಡಿಸೆಂಬರ್ ಕಾಲಿಡುವ ಮುನ್ನವೇ ಗೊತ್ತಾಗಲಿದೆ. ■